# ಕರ್ನಾಟಕ ವಿಧಾನ ಪರಿಷತ್ತು

1 ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು)

2 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 41

3 ಉತ್ತರಿಸಬೇಕಾದ ದಿನಾಂಕ : 02-03-2020

4. ಉತ್ತರಿಸಬೇಕಾದವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ನೌಕರರ ರಾಜ್ಯ ವಿಮಾ ನಿಗಮ (ESIC) ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು ಎಷ್ಟು: | ಪ್ರಸ್ತುತ ರಾಜ್ಯ ಸರ್ಕಾರವು ಮಾಡಲಾದ ವೈದ್ಯಕೀಯ ವೆಚ್ಚದಲ್ಲಿ 7/8 ಭಾಗ ಕಾರಾವಿ. ನಿಗಮವು ರಾಜ್ಯ ಸರ್ಕಾರಕ್ಕೆ ಪುನರ್ ಭರಣ ಮಾಡುತ್ತಿದ್ದು, ಉಳಿದ 1/8ನೇ ಭಾಗವನ್ನು ಮಾತ್ರ ರಾಜ್ಯ ಸರ್ಕಾರವು ಭರಿಸುತ್ತಿದೆ. |
| ಆ | ವಿಮಾ ವ್ಯಾಪ್ತಿಗೆ ಒಳಪಡಲು ನೌಕರರಿಗೆ ಇರುವ ಮಾನ ದಂಡವೇನು: | ಮಾಸಿಕವಾಗಿ ರೂ. 21,000/- ವರೆಗೆ ವೇತನ ಪಡೆಯುವ ನೌಕರರು ಹಾಗೂ (ಮಾಸಿಕವಾಗಿ ರೂ. 25,000/- ವರೆಗೆ ವೇತನ ಪಡೆಯುವ ವಿಕಲಚೇತನ ನೌಕರರು) ಕಾರಾವಿ. ಕಾಯ್ದೆ 1948 ಅಡಿಯಲ್ಲಿ ವಿಮಾ ವ್ಯಾಪ್ತಿಗೆ ಒಳಪಡುತ್ತಾರೆ. |
| ಇ | ವಿಮಾ ವ್ಯಾಪ್ತಿಗೆ ಬರುವ ನೌಕರರಿಗೆ ಲಭ್ಯವಿರುವ ಚಿಕಿತ್ಸೆಗಳಾವುವು: | ಕಾರಾವಿ. ಕಾಯ್ದೆಯ ವಿಮಾವ್ಯಾಪ್ತಿಗೆ ಒಳಪಡುವ ನೌಕರರು ಮೊದಲ ದಿನದಿಂದಲೇ ಪ್ರಾಥಮಿಕ ಹಾಗೂ ಸಾಮಾನ್ಯ ಚಿಕಿತ್ಸೆಗಳನ್ನು ಪಡೆಯಲು ಅರ್ಹರಿರುತ್ತಾರೆ. ವಿಮಾದಾರರಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಉತ್ಕೃಷ್ಟ ಚಿಕಿತ್ಸೆಯನ್ನು ಕೆಲವು ಅರ್ಹತಾ ನಿಬಂಧನೆಗೆ ಒಳಪಟ್ಟು ವಿಸ್ತರಿಸಲಾಗುತ್ತಿದೆ.<br><u>The Medical care consists of the following facilities:</u><br>1). Outpatient treatment<br>2). Specialist's consultation<br>3). Inpatient treatment<br>4). Free supply of drugs, dressings, Artificial limbs aids and appliances like, hearing aid, tooth wigs, Crutches, Wheel chair, Cervical collars etc. |

| | | |
|---|---|---|
| | | 5). X-Ray & Laboratory investigations<br>6). Vaccination and preventive inoculations<br>7). Antenatal care, confinement and post-natal care<br>8). Ambulance service or conveyance charges for going hospitals<br>9). Diagnostic Centres etc.<br>10). Medical certifications, &<br>11). Special provisions including specialised treatment in reputed medical institutions viz., Neuro Surgery, Heart Transplantation, Bypass, Kidney Transplantation etc. |
| ಈ | ನೌಕರರು ತುರ್ತು ಅನಾರೋಗ್ಯ / ಮಾರಣಾಂತಿಕ / ಧೀರ್ಘಾವಧಿ ರೋಗಕ್ಕೆ ತುತ್ತಾದಲ್ಲಿ ಅಥವಾ ವಿಮಾಕೇಂದ್ರದಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಮರಣ ಹೊಂದಿದಲ್ಲಿ ನೌಕರರಿಗೆ ತಕ್ಷಣಕ್ಕೆ ಮತ್ತು ತದನಂತರ ಸಿಗಬಹುದಾದ ನೆರವು/ಪರಿಹಾರದ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು. | ಕಾಯಿಲೆ ನಗದು ಸೌಲಭ್ಯವನ್ನು ನೌಕರರಿಗೆ ಮೊದಲ 91 ದಿನಗಳಿಗೆ ಅವರ ವೇತನದ ಶೇಕಡಾ 70 ರಷ್ಟು ಹಾಗೂ ಸದರಿ ಕಾಯಿಲೆಯ ಮುಂದುವರೆದ ಚಿಕಿತ್ಸೆಗೆ 730 ದಿನಗಳಿಗೆ (ಮೊದಲ 91 ದಿನಗಳು ಒಳಗೊಂಡಂತೆ) ಅವರ ಪರಿಷ್ಕೃತ ವೇತನದ ಶೇಕಡಾ 80 ರಷ್ಟು (in the case of 34 malignant and long term diseases) ನಗದು ವೇತನ ಪರಿಹಾರ ಪಡೆಯಲು ಕಾಯ್ದೆಯಲ್ಲಿ ಅವಕಾಶವಿರುತ್ತದೆ.<br><br>ಹಾಗೂ ವಿಮಾದಾರರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಲು ಕಾ.ರಾ.ವಿ. ಕಾಯ್ದೆ 1948 ರಲ್ಲಿ ಸೌಲಭ್ಯವಿರುತ್ತದೆ.<br><br>1). ವಿಮಾದಾರರು ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿ ಮೊದಲನೇ ದಿನದಿಂದಲೇ Temporary Disablement Benefit (TDB) ಅರ್ಹತೆ ಹೊಂದುತ್ತಾರೆ. ಹಾಗೂ ಮಾಸಿಕ ವೇತನದ ಶೇಕಡಾ 90 ರಷ್ಟು TDB ನ್ಯೂನತೆ ಪರಿಹಾರವಾಗುವವರೆಗೆ ಸೌಲಭ್ಯಕ್ಕೆ ಅರ್ಹರಿರುತ್ತಾರೆ.<br><br>2) ವಿಮಾದಾರರು ವೈದ್ಯಕೀಯ ಮಂಡಳಿಯ ಶಿಫಾರಸ್ಸಿನ ಮೇರೆಗೆ ವಿಮಾರೋಗಿಗೆ ಮಾಸಿಕ ವೇತನದ ಶೇಕಡಾ 90 ರಷ್ಟು Permanent Disablement Benefit (PDB) ಪಡೆಯಲು ಅವಕಾಶವಿರುತ್ತದೆ. |

| | | |
|---|---|---|
| | | 3). ವಿಮಾದಾರರು ಕರ್ತವ್ಯ ನಿರ್ವಹಿಸುವ ಸ್ಥಳ ಹಾಗೂ ವೇಳೆಯಲ್ಲಿ ಮರಣ ಹೊಂದಿದಲ್ಲಿ, ಅವರ ಕುಟುಂಬದವರಿಗೆ ವಿಮಾದಾರರು ಪಡೆಯುತ್ತಿದ್ದ ಮಾಸಿಕ ವೇತನದ ಶೇಕಡಾ 90 ರಷ್ಟು Dependants Benefit (DB) ಮಂಜೂರಾತಿಗೆ ಅವಕಾಶವಿರುತ್ತದೆ.<br><br>4). ವಿಮಾದಾರರು ಮರಣ ಹೊಂದಿದಲ್ಲಿ ಅವರ ಕುಟುಂಬದವರಿಗೆ ರೂ.15,000/- ಗಳನ್ನು ಶವಸಂಸ್ಕಾರದ ವೆಚ್ಚಕ್ಕೆ ಅವಕಾಶವಿರುತ್ತದೆ (ವಿಮಾದಾರರು ವಿಮಾ ವ್ಯಾಪ್ತಿಗೆ ಒಳಪಟ್ಟ ಮೊದಲ ದಿನದಿಂದಲೇ) |

ಕಡತ ಸಂಖ್ಯೆ: ಕಾಇ-ಎಲ್‌ಎಸ್‌ಐ/39/2020

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು